ಮತ್ತು ಅಭ್ಯರ್ಥಿಗಳು ಸಮಾಲೋಚಿಸಿ ಬೇರೆ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು.

17. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ, ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ ಮತ್ತು ಸದಸ್ಯ ಸಂಚಾಲಕರು ಹಾಗೂ ಆಯಾಯ ಕ್ಷೇತ್ರದ ವಿದ್ವಾಂಸರನ್ನು ಒಳಗೊಂಡ ತಜ್ಞರ ಆಯ್ಕೆ ಸಮಿತಿಯ ಮೂಲಕ ಅರ್ಜಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು.

18. ಪ್ರಗತಿ ವರದಿಯು ಕನಿಷ್ಠ 10 ಪುಟಗಳಿರಬೇಕು ಮತ್ತು ಸಂಶೋಧನಾ ಪ್ರಬಂಧವು ಕನಿಷ್ಠ 120 ಪುಟಗಳ ಮೇಲೆ ಒಳಗೊಂಡಿರಬೇಕು. ಸಾರಲೇಖವು ಅಧ್ಯಾಯಗಳ ವರ್ಗೀಕರಣವನ್ನು ಒಳಗೊಂಡಂತೆ ಕನಿಷ್ಠ 10 ಪುಟಗಳಿರಬೇಕು. ಎ4 ಅಳತೆಯ ಹಾಳೆಯ ಒಂದೇ ಮಗ್ಗುಲಿನಲ್ಲಿ (ನುಡಿ 1ಇ ಫಾಂಟ್‌ನಲ್ಲಿ 12 ಅಕ್ಷರ ಗಾತ್ರ ಮತ್ತು ಒಂದೂವರೆ ಸಾಲಿನ ಅಂತರದಲ್ಲಿ) ನುಡಿ ತಂತ್ರಾಂಶದಲ್ಲಿ ಮೇಲ್ಕಂಡ ಪ್ರಗತಿ ವರದಿ, ಸಾರಲೇಖ ಮತ್ತು ಸಂಶೋಧನಾ ಪ್ರಬಂಧಗಳು ಇರಬೇಕಾಗುತ್ತದೆ. ಸಂಶೋಧನಾ ಬರವಣಿಗೆಯು ಸಂಶೋಧನೆಯ ಶಿಸ್ತಿನಿಂದ ಕೂಡಿರುವುದು ಅಪೇಕ್ಷಣೀಯ.

19. ಸಾರಲೇಖ, ಪ್ರಗತಿ ವರದಿ ಸಲ್ಲಿಸುವಾಗ ಪ್ರತಿಯೊಂದನ್ನೂ 05 ಪ್ರತಿಗಳಲ್ಲಿ ಸಲ್ಲಿಸಬೇಕಾಗಿರುತ್ತದೆ.

20. ಅಂತಿಮವಾಗಿ ಸಂಶೋಧನಾ ಪ್ರಬಂಧ ಸಲ್ಲಿಸುವಾಗ 03 ಪ್ರತಿಗಳಲ್ಲಿ (ಮಾರ್ಗದರ್ಶಕರ 1 ಪ್ರತಿ ಹಾಗೂ ಅಕಾಡೆಮಿಗೆ 2 ಪ್ರತಿಗಳಲ್ಲಿ) ಪುಸ್ತಕ ಮತ್ತು ಒಂದು ಸಿ.ಡಿ.ಯನ್ನು ಕಡ್ಡಾಯವಾಗಿ ಕರ್ನಾಟಕ ನಾಟಕ ಅಕಾಡೆಮಿಗೆ ಸಲ್ಲಿಸಬೇಕು.

21. ಪೂರ್ಣಗೊಂಡ ಸಂಶೋಧಕರ ಸಂಶೋಧನ ಸಾಮಗ್ರಿ /ಪ್ರಬಂಧ ಇತ್ಯಾದಿಗಳ ಮೇಲೆ ಅಕಾಡೆಮಿಗೆ ಸಂಪೂರ್ಣ ಸ್ವಾಮ್ಯವಿರುತ್ತದೆ. ಅಲ್ಲದೆ ಅದರ ಪ್ರಕಟಣೆಯ ಹಕ್ಕನ್ನು ಅಕಾಡೆಮಿ ಹೊಂದಿರುತ್ತದೆ.

22. ಸಂಶೋಧಕರು ತಮ್ಮ ಅಧ್ಯಯನವನ್ನು ನಿಗದಿಗ ಸಮಯದಲ್ಲಿ ಪೂರ್ಣಗೊಳಿಸದಿದ್ದಲ್ಲಿ ತಾವು ಪಡೆದಿರುವ ಫೆಲೋಶಿಪ್ ಹಣವನ್ನು ಅದನ್ನು ಪಡೆದ ದಿನದಿಂದ ಬ್ಯಾಂಕ್ ನಿಯಮಾವಳಿಯಂತೆ ಬಡ್ಡಿ ಸಮೇತ ಅಕಾಡೆಮಿಗೆ ಮರುಪಾವತಿ ಮಾಡಲು ಬಾಧ್ಯರಾಗಿರುತ್ತಾರೆ. ಈ ಬಗ್ಗೆ ಕರಾರು ಪತ್ರಕ್ಕೆ ಸಹಿ ಹಾಕಬೇಕಾಗುತ್ತದೆ.

**23. ಫೆಲೋಶಿಪ್ ಅರ್ಜಿ ಮತ್ತು ಸಾರಲೇಖಗಳನ್ನು ಸಲ್ಲಿಸುವ ಅಂತಿಮ ದಿನಾಂಕ: 15–11–2018 ಆಗಿರುತ್ತದೆ.**

## ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

# ಫೆಲೋಶಿಪ್ 2018–19

## ಮಾರ್ಗಸೂಚಿ

**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002
ದೂ.: 080 22237484
www.karnatakanatakaacademy.com | academy.nataka@gmail.com

## ಫೆಲೋಶಿಪ್ ಮಾರ್ಗಸೂಚಿ

1. ರಂಗಕಲಾವಿದರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಂಶೋಧನೆಯಲ್ಲಿ ಆಸಕ್ತಿ ಉಳ್ಳವರು ಅರ್ಜಿ ಸಲ್ಲಿಸಬಹುದು.

2. ಸಂಶೋಧನಾ ಫೆಲೋಶಿಪ್‌ನ ಅವಧಿ 09 ತಿಂಗಳು ಆಗಿರುತ್ತದೆ. ಸಂಶೋಧನೆಯ ಅವಧಿಯು ಜನವರಿ 2019 ರಿಂದ ಸೆಪ್ಟೆಂಬರ್ 2019 ರವರೆಗೆ ನಿಗದಿಯಾಗಿರುತ್ತದೆ. ಈ ಅವಧಿಯ ಒಳಗೆ ಸಂಶೋಧನಾ ಪ್ರಬಂಧ ಸಿದ್ಧಪಡಿಸಿ ಅಕಾಡೆಮಿಗೆ ಸಲ್ಲಿಸಬೇಕಾಗುತ್ತದೆ.

3. ಫೆಲೋಶಿಪ್‌ನ ಒಟ್ಟು ಅನುದಾನ ರೂ.1,00,000/– (ಒಂದು ಲಕ್ಷ) ಆಗಿದ್ದು, ವರದಿ ಮಂಡನೆ ತೃಪ್ತಿಕರವಾಗಿದ್ದಲ್ಲಿ ತಜ್ಞರ ಶಿಫಾರಸಿಗೆ ಅನುಗುಣವಾಗಿ ಅಕಾಡೆಮಿಯು 04 ಕಂತುಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡುತ್ತದೆ.

4. ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸುವವರು ಈ ಹಿಂದೆ ನಾಟಕ ಅಕಾಡೆಮಿಯಿಂದ ಯಾವುದೇ ಕ್ಷೇತ್ರದಲ್ಲಿ ಫೆಲೋಶಿಪ್ ಪಡೆದವರಾಗಿರಬಾರದು.

5. ಯಾವ ಶ್ರೇಣಿಯಲ್ಲಾದರೂ ಯಾವುದಾದರೂ ರಾಜ್ಯ ಇಲ್ಲವೇ ಕೇಂದ್ರ ಸರ್ಕಾರದ ವತಿಯಿಂದ ಶಿಷ್ಯವೇತನ ಅಥವಾ ಫೆಲೋಷಿಪ್‌ಗಳನ್ನು ಈಗ ಪಡೆಯುತ್ತಿದ್ದಲ್ಲಿ ಅಂಥವರು ಸಹಾ ಅರ್ಜಿ ಹಾಕುವಂತಿಲ್ಲ.

6. ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸುವವರು ತಾವು ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ಹಾಲಿ ಯಾವುದೇ ವಿಶ್ವವಿದ್ಯಾನಿಲಯ / ಸಂಸ್ಥೆ/ ಯೋಜನೆಗಳಲ್ಲಿ ಪಿಹೆಚ್.ಡಿ ಅಥವಾ ಸಂಶೋಧನೆಗಾಗಿ ನೋಂದಾಯಿಸಿರಬಾರದು.

7. ಒಂದು ವೇಳೆ ಅರ್ಜಿದಾರರು ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಯಲ್ಲಿ/ ಸಂಘಟನೆಗಳಲ್ಲಿ/ ಉದ್ದಿಮೆಗಳಲ್ಲಿ/ ವಿಶ್ವವಿದ್ಯಾಲಯಗಳಲ್ಲಿ/ ಯು.ಜಿ.ಸಿ ಅನುದಾನಿತ ಕಾಲೇಜುಗಳಲ್ಲಿ ನೌಕರಿ ಮಾಡುತ್ತಿದ್ದಲ್ಲಿ ಅಂಥಹವರು ಅರ್ಜಿಯನ್ನು ಸಂಬಂಧಿಸಿದ ಮೇಲಾಧಿಕಾರಿಗಳ ಮೂಲಕ ಸಲ್ಲಿಸಬೇಕು.

8. ಫೆಲೋಶಿಪ್ ಮಾಡಲಿಚ್ಛಿಸುವವರು ತಾವು ಕೈಗೊಳ್ಳಲಿರುವ ಸಂಶೋಧನೆ / ಅಧ್ಯಯನದ ವಿಷಯವನ್ನು ಒಳಗೊಂಡ ಸಾರಲೇಖಗಳನ್ನು ತಮ್ಮ ಅರ್ಜಿಯೊಂದಿಗೆ ಲಗತ್ತಿಸಬೇಕು.

9. ಸಂಶೋಧಕರ ಸಂಶೋಧನೆ/ಅಧ್ಯಯನಗಳು ನೂತನವಾಗಿರಬೇಕು ಮತ್ತು ಸ್ವಂತದ್ದಾಗಿರಬೇಕು. ಬೇರೊಬ್ಬರ ಸಂಶೋಧನೆಗಳನ್ನು ತಮ್ಮ ಹೆಸರಿನಲ್ಲಿ ಮಂಡಿಸಿದ್ದು ಕಂಡುಬಂದಲ್ಲಿ, ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು.

10. ಸಂಶೋಧನಾ ಫೆಲೋಶಿಪ್ ಪ್ರಕ್ರಿಯೆಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ ಅದನ್ನು ಯಾವುದೇ ಹಂತದಲ್ಲಿ ಹಿಂಪಡೆಯಲು/ತಿರಸ್ಕರಿಸುವ ಬಗ್ಗೆ ಅಕಾಡೆಮಿಯು ಕೈಗೊಳ್ಳುವ ತೀರ್ಮಾನ ಅಂತಿಮವಾಗಿರುತ್ತದೆ.

11. ಸಂಶೋಧನೆಯ ಅವಧಿಯಲ್ಲಿ ಮೂರು ಪ್ರಗತಿ ವರದಿಗಳನ್ನು ಸಲ್ಲಿಸಬೇಕಾಗುತ್ತದೆ ಮತ್ತು ಆ ಪ್ರಗತಿ ವರದಿಗಳನ್ನು ಅಕಾಡೆಮಿಯು ಏರ್ಪಡಿಸುವ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಖುದ್ದಾಗಿ ಹಾಜರಿದ್ದು ಮಂಡಿಸಬೇಕಾಗಿರುತ್ತದೆ.

12. 9 ತಿಂಗಳ ಅವಧಿಯಲ್ಲಿ ಒಟ್ಟು 3 ಪ್ರಗತಿ ವರದಿಗಳನ್ನು ಸಲ್ಲಿಸಿ ಮಂಡಿಸಬೇಕಾಗುತ್ತದೆ. ವರದಿಯನ್ನು ಸಲ್ಲಿಸಿ ಮಂಡಿಸಿದ ನಂತರ ಪ್ರತಿ ವರದಿಗೆ ತಲಾ ರೂ.15,000/– ಗಳಂತೆ ಒಟ್ಟು ರೂ.45,000/– ಗಳನ್ನು ಬಿಡುಗಡೆ ಮಾಡಲಾಗುವುದು. ಪ್ರಬಂಧವನ್ನು ಪೂರ್ಣ ಪ್ರಮಾಣದಲ್ಲಿ ಮಂಡಿಸಿದ ನಂತರ ಉಳಿಕೆ ಮೊತ್ತ ರೂ.55,000/– ಗಳನ್ನು ಬಿಡುಗಡೆ ಮಾಡಲಾಗುವುದು.

13. ಜನವರಿ ಮೊದಲ ವಾರದಲ್ಲಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಸಂದರ್ಶನದ ಮೂಲಕ ಆಯ್ಕೆಯಾದವರ ಪಟ್ಟಿಯನ್ನು ನಂತರದಲ್ಲಿ ಅಕಾಡೆಮಿಯು ಪ್ರಕಟಪಡಿಸುತ್ತದೆ.

14. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಶೋಧನೆಗೆ ತೊಡಗುವ ಮುನ್ನ ಒಂದು ಅಥವಾ ಎರಡು ದಿನಗಳ ಕೋರ್ಸ್‌ವರ್ಕ್ ನಡೆಸಲಾಗುತ್ತದೆ. ಕೋರ್ಸ್‌ವರ್ಕ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ಇಲ್ಲವಾದಲ್ಲಿ ಫೆಲೋಶಿಪ್ ರದ್ದುಗೊಳಿಸಲಾಗುವುದು.

14. ಅರ್ಜಿಗಳನ್ನು ಅಕಾಡೆಮಿಯು ಸಿದ್ಧಪಡಿಸಿರುವ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಮಾರ್ಗದರ್ಶಕರ ಜೊತೆ ಸಮಾಲೋಚಿಸಿ ವಿಷಯವನ್ನು ಅಂತಿಮಗೊಳಿಸಬಹುದು.

16. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಆಸಕ್ತಿಯ ರಂಗಭೂಮಿಗೆ (ಕನ್ನಡ ಹವ್ಯಾಸಿ, ವೃತ್ತಿ, ನೇಪಥ್ಯ, ಕಲಾವಿದ, ನಿರ್ದೇಶಕ ಕೇಂದ್ರೀತ, ಇತ್ಯಾದಿ) ಸಂಬಂಧಿಸಿದಂತೆ, ಸಂಶೋಧನಾ ವಿಷಯವನ್ನು ಒಳಗೊಂಡಂತೆ ಆಯ್ಕೆ ಪ್ರಕ್ರಿಯೆಗಾಗಿ ಕನಿಷ್ಠ 5–10 ಪುಟಗಳ ಸಾರಲೇಖವನ್ನು ತಮ್ಮ ಅರ್ಜಿಯೊಂದಿಗೆ ಸಲ್ಲಿಸುವುದು. ಆಯ್ಕೆಯಾದ ನಂತರ ಅಭ್ಯರ್ಥಿಗಳ ವಿಷಯಗಳು ಸೂಕ್ತವಾಗಿದ್ದಲ್ಲಿ ಮಾರ್ಗದರ್ಶಕರು ಮತ್ತು ಸಮಿತಿಯ ಅನುಮೋದನೆ ಮೇರೆಗೆ ಒಪ್ಪಲಾಗುವುದು. ಇಲ್ಲವೇ ನಿಗದಿಯಾದ ಮಾರ್ಗದರ್ಶಕರು